**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ**

**ನ್ಯಾಯಾಲಯ ಹುಕ್ಕೇರಿ**

**ಸಿಸಿ ನಂ ಃ 2389/2023**
**ಸಿಡಬ್ಲ್ಯು ಃ 4**
**ಪಿಡಬ್ಲ್ಯು ಃ 7**

**ಹೆಸರು** ಃ ಮಾರುತಿ ಫಕ್ಕೀರಪ್ಪ ಚುವಗೋಳ
**ವಯಾ** ಃ 56 ವರ್ಷ
**ಉದ್ಯೋಗ** ಃ ಒಕ್ಕಲುತನ
**ವಾಸ** ಃ ಭೂತರಾಮನಟ್ಟಿ ತಾಃ ಬೆಳಗಾವಿ

**ಮುಖ್ಯ ವಿಚಾರಣೆ - ಸಸಅ ರವರು ಈ ದಿನ ಗೈರು ಹಾಜರ ಆಗಿದ್ದು ಸಾಕ್ಷಿ ಸ್ವತಃ ಸಾಕ್ಷಿ ಹೇಳಲು ಸಿದ್ದನಿರುವುದರಿಂದ ಕಲಂ 311 ಸಿ ಆರ್ ಪಿ ಸಿ ಅಡಿಯಲ್ಲಿ ಸಾಕ್ಷಿ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು.**

**(ದಿನಾಂಕಃ 02-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು)**

**ಮುಖ್ಯ ವಿಚಾರಣೆ : ಸಸಅಃರವರಿಂದ ಸರಕಾರದ ಪರವಾಗಿ ಃ**

ದಿನಾಂಕ 9-4-2023 ರಂದು ಮಧ್ಯಾಹ್ನ 2-30 ಗಂಟೆಗೆ ನನ್ನನ್ನು ಮತು ಚಾಸಾ-5 ಇವರನ್ನು ಯಮಕನಮರಡಿ ಪೋಲಿಸರು ಹೊಸೂರನಿಂದ ಇಂಗಳಿಗೆ ಹೋಗುವ ರಸ್ತೆಯಲ್ಲಿ ಒಂದು ಅಪಘಾತ ಆಗಿತ್ತು . ಆ ಅಪಘಾತ ಸ್ಥಳದ ಪಂಚನಾಮೆ ಮಾಡಲು ನನ್ನನ್ನು ಮತ್ತು ಚಾಸಾ-5 ಇವರನ್ನು ಕರೆದು ಅಲ್ಲಿ ಪಂಚನಾಮೆ ಮಾಡಿ ಫೋಟೊ ತೆಗೆದು ನಕಾಶೆಯನ್ನು ಬರೆದರು. ಸದರಿ ಸ್ಥಳ ಪಂಚನಾಮೆಯನ್ನು ಈಗ ನೋಡುತ್ತಿದ್ದೇನೆ . ಅದರಲ್ಲಿ ನನ್ನ ಸಹಿ ಇದೆ. ಸದ್ರಿ ಪಂಚನಾಮೆ ಯನ್ನು ಈಗಾಗಲೇ ನಿ.ಪಿ-5 ಎಂದು ಗುರುತಿಸಲಾಗಿದ್ದು ಹಾಗೂ ಸಾಕ್ಷಿ ಸಹಿಯನ್ನು ನಿಪಿ-5(ಸಿ) ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ಈಗ ನೋಡುತ್ತಿದ್ದೇನೆ. ಅದರಲ್ಲಿ ನನ್ನ ಸಹಿ ಇದೆ. ಸದ್ರಿ ಕಚ್ಚಾ ನಕಾಶೆಯನ್ನು ಈಗಾಗಲೇ ನಿ.ಪಿ-6 ಎಂದು ಗುರುತಿಸಲಾಗಿದ್ದು ಹಾಗೂ ಸಾಕ್ಷಿ ಸಹಿಯನ್ನು ನಿಪಿ-6(ಸಿ) ಎಂದು ಗುರುತಿಸಲಾಯಿತು. ಅಂದು ತೆಗೆದ ಫೋಟೊ ನೋಡುತ್ತಿದ್ದೇನೆ ಅದನ್ನು ಈಗಾಗಲೇ ನಿ.ಪಿ-7 ಎಂದು ಗುರುತಿಸಲಾಗಿದೆ. ಸಾಕ್ಷಿ ತನ್ನನ್ನು ಫೋಟೊದಲ್ಲಿ ನೋಡಿ ಗುರುತಿಸಿಕೊಂಡಿರುತ್ತಾರೆ. ಅದೇ ದಿನ ಅಪಘಾತಕ್ಕೊಳಗಾದಂತಹ ವಾಹನದ ಪಂಚನಾಮೆ ಮಾಡಲು ಪೋಲಿಸರು ಕರೆದುಕೊಂಡು ಹೋಗಿದ್ದರು. ಅಲ್ಲಿ ವಾಹನದ ಫೋಟೊ ತೆಗೆದರು. ಸದರಿ ವಾಹನ ಹಿರೊ ಹೋಂಡಾ ಸ್ಪೆಂಡರ ಪ್ಲಸ ಮೋಟಾರ ಬೈಕ ಆಗಿತ್ತು . ಸದರಿ

ಫೊಟೊಗಳನ್ನು ನಿ.ಪಿ-9 ರಿಂದ 12 ಎಂದು ಗುರುತಿಸಲಾಗಿದೆ. ಅಂದು ಮಾಡಿದ ಪಂಚನಾಮೆ ನೋಡುತ್ತಿದ್ದೇನೆ . ಅದರಲ್ಲಿ ನನ್ನ ಸಹಿ ಇದೆ. ಸದ್ರಿ ಪಂಚನಾಮೆ ಯನ್ನು ಈಗಾಗಲೇ ನಿ.ಪಿ-8 ಎಂದು ಗುರುತಿಸಲಾಗಿದ್ದು ಹಾಗೂ ಸಾಕ್ಷಿ ಸಹಿಯನ್ನು ನಿಪಿ-8(ಸಿ) ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ** ಆರೋಪಿ ಪರ ಶ್ರೀ ಎಸ್ ಎನ್ ಡಿ ವಕೀಲರಿಂದ -

ನಿ.ಪಿ-**8** ಮತ್ತು **5** ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಪೋಲಿಸರ ಕೋರಿಕೆ ಮೇರೆಗೆ ಸಹಿ ಮಾಡಿದ್ದೆನೆ ಎಂದರೆ ನಿಜ. ನಾನು ಯಮಕನಮರಡಿ ಪೋಲಿಸ ಠಾಣೆಗೆ ಆಗಾಗ ಪಂಚಾಯತಿ ಮಾಡಲು ಹೋಗುತ್ತೇನೆ ಎಂದರೆ ನಿಜ. ಆ ಸಮಯದಲ್ಲಿ ಪೋಲಿಸರು ನನ್ನ ಸಹಿಯನ್ನು ಪಡೆದಿದ್ದಾರೆ . ಏಕೆ ಪಡೆದಿದ್ದಾರೆ ಎಂದು ನನಗೆ ಹೇಳಲು ಬರುವುದಿಲ್ಲ. ಫೋಟೊ ಏಕೆ ತೆಗೆದುಕೊಂಡರು ಎಂದು ನನಗೆ ಗೊತ್ತಿಲ್ಲ.

ಮರು ವಿಚಾರಣೆ ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

( ಆದಿತ್ಯ ಆರ್ ಕಲಾಲ್ )

**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**